ಆ) ಮೇಲೆ ವಿವರಿಸಿರುವಂತೆ 2003-04ನೇ ಸಾಲಿನಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಲಕ್ಕವಳ್ಳಿ ಮತ್ತು ಭದ್ರಾವತಿ ಸಂಪರ್ಕಕ್ಕಾಗಿ ಗೊಂದಿ ಸೇತುವೆ ನಿರ್ಮಾಣ

580 (4981) : ಶ್ರೀ ನೀಲಕಂಠಪ್ಪ ಬಿ.ಆರ್ (ತರೀಕೆರೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಲಕ್ಕವಳ್ಳಿ ಮತ್ತು ಭದ್ರಾವತಿ ಸಂಪರ್ಕಕ್ಕಾಗಿ ಹಾಗೂ ರೈತರ ಕಬ್ಬಿನ ಸಾಗಾಣಿಕೆಗಾಗಿ ಗೊಂದಿ ಸೇತುವೆ ನಿರ್ಮಾಣಕ್ಕಾಗಿ 1 ಕೋಟಿ ಅಂದಾಜು ವೆಚ್ಚ ಆಗಲಿದ್ದು, ಈ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು.

ಆ) ಸದರಿ ಕಾಮಗಾರಿಯನ್ನು ಯಾವ ಅವಧಿಯಲ್ಲಿ ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು.

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಈ ಕಾಮಗಾರಿಗೆ ರೂ.199.00 ಲಕ್ಷಗಳಿಗೆ ಅಂದಾಲು ತಯಾರಿಸಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಆಡಳಿತಾತ್ಮಕ ಮಂಜೂರಾತಿ ದೊರೆತ ನಂತರ ಟೆಂಡರ್ ಕರೆದು ಒಂದು ವರ್ಷದ ಅವಧಿಯಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಚುಕ್ಕಿ ಗುರುತಿಲ್ಲದ ಪಶ್ನೋತ್ತರಗಳು

ಸಸ್ಯ ಸಂರಕ್ಷಣಾ ಕಾರ್ಯಗಳು

4651 (5435) : ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತೋಟಗಾರಿಕಾ ಬೆಳೆಗಳು, ಹೊಸ ರೋಗಗಳಿಗೆ ತುತ್ತಾಗುತ್ತಿರುವುದನ್ನು ಗಮನಿಸಲಾಗುತ್ತಾ ಇದೆಯೇ;

ಆ) ಹಾಗಿದ್ದಲ್ಲಿ, ಈ ದಿಶೆಯಲ್ಲಿ ಸಸ್ಯ ಸಂರಕ್ಷಣಾ ಕಾರ್ಯಗಳಿಗೆ ಹೆಚ್ಚು ಮಹತ್ವ ನೀಡಲು, ಕೈಗೊಳ್ಳಲಾಗುವ ಕಾರ್ಯಕ್ರಮಗಳೇನು;

ಇ) ತೋಟಗಾರಿಕೆ ಇಲಾಖೆಯಲ್ಲಿ ಸಂಶೋಧನಾ ವಿಭಾಗವನ್ನು, ಈ ದಿಶೆಯಲ್ಲಿ ಪ್ರಾರಂಭ ಮಾಡಲಾಗುವುದೇ?

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು):

ಅ) ಗಮನಿಸಲಾಗುತ್ತಿದೆ.

ಆ) • ರಾಜ್ಯಮಟ್ಟದಲ್ಲಿ ಪರಿಣಿತ ತಾಂತ್ರಿಕ ಸಮಿತಿಯನ್ನು ರಚಿಸಲಾಗಿದೆ.

• ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ತಜ್ಞರನ್ನೊಳಗೊಂಡ ರೋಗ ಮತ್ತು ಕೀಟಗಳ ಸರ್ವೇಕ್ಷಣಾ ತಂಡವನ್ನು ರಚಿಸಿದೆ.

• ತಾಂತ್ರಿಕ ಸಲಹೆಗಳನ್ನು ರೈತರಿಗೆ ಪ್ರಚಾರ ಮಾಧ್ಯಮಗಳು, ವಿಚಾರ ಸಂಕಿರಣಗಳು, ಕಾರ್ಯಗಾರಗಳು ಕರಪತ್ರಗಳು ಇತ್ಯಾದಿಗಳ ಮೂಲಕ ಮಾಹಿತಿ ಒದಗಿಸಲಾಗುತ್ತಿದೆ.

• ರೈತರಿಗೆ ತರಭೇತಿ ನೀಡುವ ಮೂಲಕ ಅರಿವು ಮೂಡಿಸಲಾಗುತ್ತಿದೆ.

• ವಿವಿಧ ಬೆಳೆಗಳ ಬಗ್ಗೆ ಅಂತರ ರಾಷ್ಟ್ರೀಯ ವಿಚಾರ ಸಂಕಿರಣಗಳನ್ನು ಏರ್ಪಡಿಸಿ ಇತ್ತೀಚಿನ ಸಸ್ಯ ಸಂರಕ್ಷಣಾ ಸಂಶೋಧನೆಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ರೈತರಿಗೆ ಹಾಗೂ ಅಧಿಕಾರಿಗಳಿಗೆ ಒದಗಿಸಲಾಯಿತು.

• ರೋಗಗಳ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ.

• ಆರೋಗ್ಯ ಸುಧಾರಣೆ ಹಾಗೂ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಮಗ್ರ ಬೇಸಾಯ ಕ್ರಮಗಳ ಪ್ರಾತ್ಯಕ್ಷತೆಯನ್ನು ಏರ್ಪಡಿಸಲಾಗುತ್ತಿದೆ. ಸಾವಯವ ಬೇಸಾಯ ಹಾಗೂ ಜೈವಿಕ ನಿಯಂತ್ರಣಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ.

• ತೆಂಗಿನ ಗರಿ ತಿನ್ನುವ ಕಷ್ಟು ತಲೆ ಹುಳುವಿನ ನಿಯಂತ್ರಣಕ್ಕಾಗಿ ಪರೋಪಜೀವಿಗಳನ್ನು ಉತ್ಪಾದಿಸಿ ಉಚಿತವಾಗಿ ರೈತರಿಗೆ ಒದಗಿಸಲಾಗುತ್ತಿದೆ

ಇ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಆದಾಗ್ಯೂ, ಕರ್ನಾಟಕ ರಾಜ್ಯದ ವಿವಿಧ ಭಾಗಗಳಲ್ಲಿ ಕೇಂದ್ರ ಸರ್ಕಾರದಿಂದ ಹಾಗೂ ಕೃಷಿ ವಿಶ್ವ ವಿದ್ಯಾನಿಲಯ ವತಿಯಿಂದ ಸಂಶೋಧನಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ತೋಟಗಾರಿಕೆ ಇಲಾಖೆಯು ಅನುದಾನ ಒದಗಿಸಿ ವಿಶೇಷ ಸಮಸ್ಯೆಗಳ ಅಧ್ಯಯನ ಮತ್ತು ಪರಿಹಾರ ಕಂಡುಕೊಳ್ಳಲು ಸಂಶೋಧನೆಗೆ ನೆರವು ಒದಗಿಸುತ್ತಿದೆ.

ವಿಶ್ವೇಶರಯ್ಯ ನಾಲಾ ಬಯಲಿನ ಅಚ್ಚುಕಟ್ಟು ಪ್ರದೇಶಗಳಲ್ಲಿ ಐ.ಟಿ. ರಸ್ತೆಗಳ ಅಭಿವೃದ್ಧಿ

4652 (5436) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಶ್ವೇಶ್ವರಯ್ಯ ನಾಲಾ ಬಯಲಿನ ಅಚ್ಚುಕಟ್ಟು ಪ್ರದೇಶದಲ್ಲಿನ ಹಾಗೂ ಮಂಡ್ಯ ಜಿಲ್ಲಾ ಪಂಚಾಯತ್ ವ್ಯಾಪ್ತಿಗೆ ಜಿಲ್ಲಾ ಸಂಪನ್ಮೂಲ ಇಲಾಖೆಯಿಂದ ಸೇರ್ಪಡೆಯಾಗಿರುವ, ಐ.ಟಿ.ರಸ್ತೆಗಳು ಸಮರ್ಪಕ ನಿರ್ವಹಣೆಯಿಲ್ಲದೇ, ರೈತರ ಕೃಷಿ ಚಟುವಟಿಕೆಗಳಿಗೆ ತೊಂದರೆಯಾಗುತ್ತಾ ಇರುವುದನ್ನು ಗಮನಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ವಿ.ಸಿ. ಬಯಲಿನ ಐ.ಟಿ. ರಸ್ತೆಗಳನ್ನು ಅಭಿವೃದ್ಧಿ ಮಾಡಲು ಸಮಗ್ರವಾಗಿ ಜಲ ಸಂಪನ್ಮೂಲ ಇಲಾಖೆಯ ವ್ಯಾಪ್ತಿಗೆ ಒಳಪಡಿಸಿ ಕಾವೇರಿ ನೀರಾವರಿ ನಿಗಮದ ಮುಖಾಂತರ ಅಭಿವೃದ್ಧಿಪಡಿಸುವ ಅವಶ್ಯಕತೆಯನ್ನು ಮನಗಂಡಿದೆಯೇ;

ಇ) ಹಾಗಿದ್ದಲ್ಲಿ, ಈ ಬಗೆಗೆ ಕೈಗೊಳ್ಳಲಾಗುವ ಕ್ರಮಗಳೇನು?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ವಿಶ್ವೇಶ್ವರಯ್ಯ ನಾಲಾ ಬಯಲಿನ ಅಚ್ಚುಕಟ್ಟು ಪ್ರದೇಶದಲ್ಲಿನ 2105.70 ಕಿ.ಮೀ. ಐ.ಟಿ. ರಸ್ತೆಗಳನ್ನು ಜಲ ಸಂಪನ್ಮೂಲ ಇಲಾಖೆಯಿಂದ ಜಿಲ್ಲಾ ಪಂಚಾಯತ್‌ಗೆ ಸರ್ಕಾರದ ಆದೇಶ ಸಂಖ್ಯೆ:ಪಿಡಬ್ಲ್ಯೂಡಿ 52 ಸಿಆರ್‌ಎಂ 85, ದಿನಾಂಕ:27-04-87ರಲ್ಲಿ ಹಸ್ತಾಂತರಿಸಲಾಗಿದೆ. ಈ ರಸ್ತೆಗಳ ನಿರ್ವಹಣೆ ಜಿಲ್ಲಾ ಪಂಚಾಯತ್ ವತಿಯಿಂದ ಕೈಗೊಳ್ಳಲಾಗುತ್ತಿದೆ. ಜಲ ಸಂಪನ್ಮೂಲ ಇಲಾಖೆಯಡಿ 687.15 ಕಿ.ಮಿ. ಉದ್ದದ ಐ.ಟಿ. ರಸ್ತೆಗಳ ನಿರ್ವಹಣೆ ಕೈಗೊಳ್ಳಲಾಗುತ್ತಿದೆ. ಜಲ ಸಂಪನ್ಮೂಲ ಇಲಾಖೆಯಡಿ ಒದಗಿಸಲಾಗುತ್ತಿರುವ ಲೆಕ್ಕ ಶೀರ್ಷಿಕೆ 3054 ಅಡಿ ಅನುದಾನ ಲಭ್ಯತೆ ಅನುಸಾರ ನಿರ್ವಹಣೆ ಕೈಗೊಳ್ಳಲಾಗುತ್ತಿದೆ.